ಶನಿವಾರ, 2 ಏಪ್ರಿಲ್ 2022 | ಪುಟಗಳು: 23 + 14 | ಬೆಲೆ: ₹ 5.00
www.vijaykarnataka.com
PRIDE OF YOUNG KARNATAKA
ಸಂಪುಟ: 23 | ಸಂಚಿಕೆ: 178
VK ವಿಜಯ ಕರ್ನಾಟಕ
ಯುಗಾದಿ ಶುಭಾಶಯ



ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಶಿವಕುಮಾರ ಸ್ವಾಮೀಜಿಗಳ ಹೆಸರು ಇಡಲು ತೀರ್ಮಾನ P02

ಮಾರ್ಚ್‌ನಲ್ಲಿ ದೇಶದ ಜಿಎಸ್‌ಟಿ ಸಂಗ್ರಹ ಸಾರ್ವಕಾಲಿಕ ದಾಖಲೆಗೆ ಸಾಕ್ಷಿಯಾಗಿದ್ದು, 1.42 ಲಕ್ಷ ಕೋಟಿ ರೂ.ಗೆ ತಲುಪಿದೆ



ಶಿವಕುಮಾರ ಸ್ವಾಮೀಜಿ 115ನೇ ಜಯಂತ್ಯುತ್ಸವಕ್ಕೆ ಕನ್ನಡದಲ್ಲೇ ಟ್ವೀಟ್ ಮಾಡಿ ಗೌರವ ಸಲ್ಲಿಸಿದ ಪ್ರಧಾನಿ

# ಹಸಿವು ಮುಕ್ತ ಮೈಸೂರಿಗೆ ಡಾ.ರಾಜೇಂದ್ರ ಸಂಕಲ್ಪ




**ಕ**ಳೆದ ಒಂದು ದಶಕದಿಂದ ಲಕ್ಷಾಂತರ ಮಂದಿಯ ಹಸಿವು ನೀಗಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಅಕ್ಷಯ ಆಹಾರ ಫೌಂಡೇಷನ್‌ನ ಡಾ.ಎಚ್.ಆರ್.ರಾಜೇಂದ್ರ ಅವರು, ಯುಗಾದಿ ಹಬ್ಬದ ಪ್ರಯುಕ್ತ ಹೊಸ ಸಂಕಲ್ಪ ಮಾಡಿದ್ದಾರೆ.

ಈಗಾಗಲೇ ಸ್ವಚ್ಛತಾ ನಗರಿ, ಪಾರಂಪರಿಕ ನಗರಿ, ಅರಮನೆಗಳ ನಗರಿ ಎಂಬ ಕೀರ್ತಿಗೆ ಪಾತ್ರವಾಗಿರುವ ಸಾಂಸ್ಕೃತಿಕ ನಗರಿ ಮೈಸೂರನ್ನು ಹಸಿವು ಮುಕ್ತ ನಗರಿಯನ್ನಾಗಿಸಲು ಪಣ ತಟ್ಟಿದ್ದಾರೆ.

ನಗರದ ಹೃದಯ ಭಾಗ ಸೇರಿದಂತೆ ನಗರ ವ್ಯಾಪ್ತಿಯ ಎಲ್ಲಾ ಬಡಾವಣೆಗಳಲ್ಲಿ ಅಕ್ಷರ ಆಹಾರ ಜೋಳಿಗೆ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ನಿರಾಶ್ರಿತರು ಮತ್ತು ನಿರ್ಗತಿಕರ ಹಸಿವು ನೀಗಿಸುವ ದೃಢ ನಿರ್ಧಾರ ಕೈಗೊಂಡಿದ್ದಾರೆ.

ಅದಕ್ಕಾಗಿ ಬೃಹತ್ ಯೋಜನೆಯನ್ನು ರೂಪಿಸಿದ್ದು, ಸಂಘ-ಸಂಸ್ಥೆಗಳೊಂದಿಗೆ ಆಸಕ್ತ ಸಮಾನ ಮನಸ್ಕರ ತಂಡವನ್ನು ಕಟ್ಟಲು ಹೊರಟಿದ್ದಾರೆ. ಮುಂದಿನ ಯುಗಾದಿಯಷ್ಟರಲ್ಲಿ ಈಗ ಅಂದು ಕೊಂಡಿರುವ ಸಂಕಲ್ಪವನ್ನು ಈಡೇರಿಸಿಕೊಂಡು, ರಾಜ್ಯದೆಲ್ಲೆಡೆ ಅಕ್ಷಯ ಆಹಾರ ಜೋಳಿಗೆಯನ್ನು ವಿಸ್ತರಿಸುವ ಮಹಾತ್ವಾಕಾಂಕ್ಷೆ ಹೊಂದಿದ್ದಾರೆ.

ಮೂಲತಃ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಹುಲಿಯೂರು ದುರ್ಗ ಹೋಬಳಿಯ ಅರಮನೆ ಹೊನ್ನಮಾಚನಹಳ್ಳಿ ಗ್ರಾಮದವರಾದ ರಾಜೇಂದ್ರ ಅವರು, ಕೃಷಿಕರಾದ ಎಚ್.ಸಿ.ರಾಜಣ್ಣ ಮತ್ತು ಎಚ್.ಸಿ. ಪ್ರೇಮಾ ಅವರ ಐವರು ಮಕ್ಕಳಲ್ಲಿ ಒಬ್ಬರು.

ಗ್ರಾಮದಲ್ಲಿಯೇ ಪ್ರಾಥಮಿಕ ಶಿಕ್ಷಣ ಪೂರೈಸಿದವರು, ಬೆಂಗಳೂರು ವಿವಿಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಉನ್ನತ ಶಿಕ್ಷಣ ಪೂರೈಸಿದ್ದಾರೆ. ಪ್ರತಿಷ್ಠಿತ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ(ಐಸೆಕ್), ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ)ಯ ನಿಯಾಜ್ ಸೇರಿದಂತೆ ನಾನಾ ಸಂಸ್ಥೆಗಳಲ್ಲಿ ಸಂಶೋಧಕರಾಗಿ ಕಾರ್ಯ ನಿರ್ವಹಿಸಿ ಕೊನೆಗೆ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಕೇಂದ್ರ ಸರಕಾರದ ಹುದ್ದೆಯನ್ನು ಪಡೆದುಕೊಂಡಿದ್ದಾರೆ. ಪ್ರಸ್ತುತ ಮೈಸೂರಿನ ಪ್ರಾದೇಶಿಕ ಪ್ರಾಕೃತಿಕ ವಸ್ತು ಸಂಗ್ರಹಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪತ್ನಿ ಎಂ.ಕೆ. ಶ್ವೇತಾ, ಮಕ್ಕಳಾದ ಇಂಪನಾ ಗೌಡ, ಚೇತಸ್ ಗೌಡ ಅವರೊಂದಿಗೆ ತುಂಬು ಜೀವನ ನಡೆಸುತ್ತಿದ್ದಾರೆ.

## ಪದೋನ್ನತಿ ತ್ಯಾಗ

ನಿರ್ಗತಿಕರ ಹಸಿವು ತುಂಬಿಸಲು ಜೋಳಿಗೆ ಹಿಡಿದ ರಾಜೇಂದ್ರ ಅವರು, ಅದಕ್ಕಾಗಿ ವೃತ್ತಿ ಜೀವನದಲ್ಲಿ ಸಿಗಬೇಕಾದ ಪದೋನ್ನತಿಯನ್ನೇ ತ್ಯಾಗ ಮಾಡಿದರು. ಪದೋನ್ನತಿ ಪಡೆದು, ಬೇರೆಡೆ ತೆರಳಿದರೆ ಉತ್ತಮ ವೇತನ, ಸೌಲಭ್ಯ ಸಿಗುವ ಅವಕಾಶವಿದ್ದರೂ, ಕೈಯಲ್ಲಿದ್ದ ಜೋಳಿಗೆ ಬಿಡಬೇಕಾಗುತ್ತದೆ ಎಂದು ಪದೋನ್ನತಿಯನ್ನೇ ತ್ಯಾಗ ಮಾಡಿ ಮೈಸೂರಿನಲ್ಲಿಯೇ ಇದ್ದು, ನಿರಾಶ್ರಿತರ ಹಸಿವು ನೀಗಿಸುತ್ತಿದ್ದಾರೆ.

## 10 ಮಂದಿಯಿಂದ ನಿತ್ಯ ಸಾವಿರ ಮಂದಿ

ರಾಜೇಂದ್ರ ಅವರು ಜೋಳಿಗೆ ಹಿಡಿದಿದ್ದೇ ರೋಚಕ ಇತಿಹಾಸ. ಕುಟುಂಬದೊಂದಿಗೆ ವಿವಾಹ ಮಹೋತ್ಸವಕ್ಕೆ ತೆರಳಿದ್ದ ರಾಜೇಂದ್ರ ಅವರಿಗೆ, ಕಲ್ಯಾಣ ಮಂಟಪದಲ್ಲಿ ಸಾವಿರಕ್ಕೂ ಹೆಚ್ಚು ಮಂದಿಗೆ ಉಣಬಡಿಸಬಹುದಾದಷ್ಟು ಊಟ ಉಳಿದಿರುವುದು ಕಂಡು ವ್ಯಥೆಯಾಯಿತು. ಅಲ್ಲಿಂದ ಮನೆಗೆ ಹೊರಡುವ ಮಾರ್ಗ ಮಧ್ಯದಲ್ಲಿಯೇ ಕಸದ ತೊಟ್ಟಿಯಲ್ಲಿ ಸುರಿದಿದ್ದ ಆಹಾರವನ್ನು ಸಂಗ್ರಹಿಸುತ್ತಿದ್ದ ಚಿಣ್ಣರ ಸ್ಥಿತಿಯನ್ನು ಕಂಡರು. ಈ ವೇಳೆ ತಾಯಿ ಹೇಳಿದ ಮಾತು, ಅವರ ಮನಸ್ಸಿಗೆ ನಾಟಿತು. 'ಆಹಾರ ಕೂಡ ದೇಶದ ಸಂಪತ್ತು, ಅದು ಸದ್ಬಳಕೆಯಾಗಬೇಕು' ಎಂದು ಅಂದೇ ಸಂಕಲ್ಪ ಮಾಡಿದರು. ನಿರ್ಗತಿಕರಿಗೆ ಆಹಾರ ನೀಡಬೇಕು. ಆದರೆ ಎಲ್ಲಿಂದ ತರೋದು ಎಂದು ಚಿಂತಿಸಿದ ರಾಜೇಂದ್ರ ಅವರು, ಮನೆಯಲ್ಲಿಯೇ ಪತ್ನಿ ಶ್ವೇತಾ ಅವರಿಗೆ ಸ್ನೇಹಿತರಿಗೆ ಊಟ ಬೇಕು ಎಂದು ಹೇಳಿ 10 ಮಂದಿಗೆ ಆಗುವಷ್ಟು ಆಹಾರ ಸಿದ್ಧಪಡಿಸಿಕೊಂಡು ತೆರಳುತ್ತಾರೆ. ಬಸ್ ನಿಲ್ದಾಣ, ರೈಲ್ವೆ ನಿಲ್ದಾಣದ ಬಳಿ ಇರುವ ನಿರಾಶ್ರಿತರ ಬಳಿ ತೆರಳಿ ನಿತ್ಯ ಊಟ ನೀಡುವ ಪರಿಪಾಠ ರೂಢಿಸಿಕೊಳ್ಳುತ್ತಾರೆ. ಸ್ನೇಹಿತರ ಮೂಲಕ ಈ ವಿಷಯ ತಿಳಿದ ಶ್ವೇತಾ ಅವರು ಪತಿಯ ಮಾನವೀಯ ಸೇವಾ ಕಾರ್ಯಕ್ಕೆ ಕೈ ಜೋಡಿಸಿ, 50 ಮಂದಿಗೆ ಆಗುವಷ್ಟು ಆಹಾರ ಸಿದ್ಧಪಡಿಸಿ, ತಾವು ಜತೆಯಲ್ಲಿಯೇ ತೆರಳಿ ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಉನ್ನತ ಶಿಕ್ಷಣ ಪಡೆದಿದ್ದರೂ ಕೆಲಸ ಬಿಟ್ಟು, ಪತಿಯ ಸೇವಾ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ.

## ಐದು ಕೇಂದ್ರ ಸ್ಥಾಪನೆ

ದಾನಿಗಳ ನೆರವಿನಿಂದ ಮದುವೆ, ಶುಭ ಸಮಾರಂಭಗಳಲ್ಲಿ ವ್ಯರ್ಥವಾಗಲಿರುವ ಆಹಾರವನ್ನು ಸಂಗ್ರಹಿಸಲು ನಾಲ್ಕು ವಾಹನಗಳ ವ್ಯವಸ್ಥೆ ಮಾಡಿಕೊಂಡಿರುವ ರಾಜೇಂದ್ರ ಅವರು, ನಗರದ ಹೃದಯ ಭಾಗ ಸೇರಿದಂತೆ ಐದು ಕಡೆ ಅಕ್ಷಯ ಆಹಾರ ಜೋಳಿಗೆ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಈ ಕೇಂದ್ರದ ಮೂಲಕ ಸ್ಥಳೀಯವಾಗಿ ಆಹಾರ ಹಂಚಿಕೆ ಮಾಡುತ್ತಿದ್ದರೆ. ತಾವೇ ವಾಹನ ಮೂಲಕ ಬಡ ವರ್ಗದವರು ಹೆಚ್ಚಾಗಿ ವಾಸಿಸುವ ಮತ್ತು ಕೊಳಚೆ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿ ತಾವೇ ಖುದ್ದಾಗಿ ಆಹಾರ ಹಂಚಿಕೆ ಮಾಡುತ್ತಿದ್ದಾರೆ. ಇವರೊಂದಿಗೆ ಪತ್ನಿ ಶ್ವೇತಾ ಮತ್ತು ಮಕ್ಕಳು ಸಹ ಕೈ ಜೋಡಿಸಿದ್ದು, ನಿರಾಶ್ರಿತರ ಹಸಿವು ನೀಗಿಸುವ ಕಾರ್ಯದಲ್ಲಿ ಇಡೀ ಕುಟುಂಬವೇ ತೊಡಗಿಸಿಕೊಂಡಿದೆ.

## ಲಾಕ್‌ಡೌನ್‌ನಲ್ಲಿಯೂ ನೆರವು

ಲಾಕ್‌ಡೌನ್ ಸಂದರ್ಭದಲ್ಲಿ ಯಾವುದೇ ಮದುವೆ, ಶುಭ ಸಮಾರಂಭಗಳು ನಡೆಯದೇ ಇದ್ದ ಸಂದರ್ಭದಲ್ಲಿ ಆಹಾರ ಸಂಗ್ರಹ ನಿಜಕ್ಕೂ ಸವಾಲಾಗಿತ್ತು. ಅಂತಹ ಸಂದರ್ಭದಲ್ಲಿ ತಾವೇ ಖುದ್ದಾಗಿ ಆಹಾರ ಸಿದ್ಧಪಡಿಸಿ ಹಂಚಿಕೆ ಮಾಡಿದರಲ್ಲದೇ, ಕೆಲ ಆಸಕ್ತ ಮೈಸೂರು ನಾಗರಿಕರ ಸಹಕಾರದಿಂದ ಆಹಾರ ಸಂಗ್ರಹಿಸಿ, ವಿತರಿಸಿದರು.

### ಸೇವಾ ಕಾರ್ಯಕ್ಕೆ ನೀವೂ ಕೈ ಜೋಡಿಸಬಹುದು

ರಾಜೇಂದ್ರ ಅವರ ಸಂಕಲ್ಪಕ್ಕೆ ಕೈ ಜೋಡಿಸುವ ಇಚ್ಛೆ ಇರುವವರು 91489 87375 ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು. ಅಕ್ಷಯ ಆಹಾರ ಫೌಂಡೇಷನ್, ಅಕೌಂಟ್ ನಂ.35522205949, SBIN0016501, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿದ್ಧಾರ್ಥ ಬಡಾವಣೆ, ಮೈಸೂರು. ವಿಳಾಸ: 143, ಸಿದ್ಧಾರ್ಥ ನಗರ, ಮೈಸೂರು.



ಯುಗಾದಿ ಹಬ್ಬದ ಪ್ರಯುಕ್ತ ಹಸಿವು ಮುಕ್ತ ಮೈಸೂರು ನನ್ನ ಸಂಕಲ್ಪ. ನಗರದೆಲ್ಲೆಡೆ ನಿರ್ಗತಿಕರಿಗೆ ಆಹಾರ ನೀಡುವ ಕೇಂದ್ರ ಸ್ಥಾಪಿಸಿದ್ದು, ಆಹಾರ ವಿತರಣೆ ಮತ್ತು ಸಂಗ್ರಹ ವ್ಯವಸ್ಥೆ ಮಾಡಲಾಗಿದೆ. ಆಸಕ್ತರು ತಮ್ಮ ಮನೆಯ ಉಳಿಕೆ ಆಹಾರವನ್ನು ತಂದು ನೀಡಬಹುದು. ಅದಕ್ಕಾಗಿ ಅಗತ್ಯ ಮೂಲ ಸೌಲಭ್ಯ ಮತ್ತು ಸಿಬ್ಬಂದಿಯ ಅವಶ್ಯಕತೆ ಇರುವುದರಿಂದ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ಜೋಳಿಗೆ ಕಾರ್ಯವನ್ನು ರಾಜ್ಯದೆಲ್ಲೆಡೆ ವಿಸ್ತರಿಸುವ ಇಚ್ಛೆ ಇದೆ.

**-ಡಾ.ಎಚ್.ಆರ್.ರಾಜೇಂದ್ರ**, ಸಂಸ್ಥಾಪಕರು, ಅಕ್ಷಯ ಆಹಾರ ಫೌಂಡೇಷನ್.



ಆಹಾರ ದೇಶದ ಸಂಪತ್ತು. ರೈತರು ಬೆಳೆದ ಆಹಾರ ವ್ಯರ್ಥವಾಗುವುದು ಸರಿಯಲ್ಲ. ಆದ್ದರಿಂದ ಪತಿ ರಾಜೇಂದ್ರ ಅವರು ನಡೆಸುತ್ತಿರುವ ಕಾರ್ಯಕ್ಕೆ ಬೆಂಬಲವಾಗಿ ನಮ್ಮ ಇಡೀ ಕುಟುಂಬವೇ ನಿಂತಿದೆ.

**-ಶ್ವೇತಾ ರಾಜೇಂದ್ರ**, ಅಧ್ಯಕ್ಷರು, ಅಕ್ಷಯ ಆಹಾರ ಫೌಂಡೇಷನ್.